5-276850

# ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆ: ಪ್ರಮುಅಸಂ(ಅಪಮು)/ಪಿಎಸ್-1/ಸಿಆರ್-59/2018-19

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು)ರವರ ಕಛೇರಿ,
ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು, ದಿನಾಂಕ 06-10-2018.

ಪ್ರಧಾನ ಮುಖ್ಯ ಅರಣ್ಯ
ಸಂರಕ್ಷಣಾಧಿಕಾರಿಯವರ ಕಛೇರಿ
(ಮುಖ್ಯಸ್ಥರು ಅರಣ್ಯಪಡೆ) ಕರ್ನಾಟಕ, ಬೆಂಗಳೂರು
12 OCT 2018
ಸಂಖ್ಯೆ:..................

## ಸುತ್ತೋಲೆ

ವಿಷಯ: ಪತ್ರಗಳ ವಿಲೇವಾರಿ ಮಾಡುವ ಬಗ್ಗೆ.

* * * *

ಹಲವಾರು ಪತ್ರಗಳನ್ನು ವಿಭಾಗ ಮಟ್ಟದಲ್ಲಿ, ವೃತ್ತ ಮಟ್ಟದಲ್ಲಿ ಹಾಗೂ ಕೇಂದ್ರ ಕಛೇರಿಗಳಲ್ಲಿ ಸ್ವೀಕರಿಸಲಾಗುತ್ತಿದ್ದೆ. ಸ್ವೀಕರಿಸಿದಂತಹ ಪತ್ರಗಳನ್ನು ಸಂಬಂಧಿಸಿದ ವಿಷಯ ನಿರ್ವಾಹಕರು ಸಮಯಕ್ಕೆ ಸರಿಯಾಗಿ ವಿಲೇವಾರಿ ಮಾಡಬೇಕು. ಈ ಸಂಬಂಧ ಕೈಪಿಡಿಯಲ್ಲಿ ನಮೂದಿಸಿರುವಂತೆ ಪ್ರತಿಯೊಬ್ಬ ವಿಷಯ ನಿರ್ವಾಹಕನು ಡೈರಿಯನ್ನು ನಿರ್ವಹಿಸುವುದು. ಪ್ರತಿ ಪತ್ರಗಳ ವಿಲೇವಾರಿಯಾದ ನಂತರ ಅವುಗಳನ್ನು ಡೈರಿಯಲ್ಲಿ ವೃತ್ತಾಕಾರದ ಮೂಲಕ ಸೂಚಿಸುವುದು. ಈ ಡೈರಿಗಳನ್ನು ವಿಷಯ ನಿರ್ವಾಹಕರ ಮೇಲ್ವಿಚಾರಕರಾದ ವ್ಯವಸ್ಥಾಪಕರು / ಆಡಳಿತ ಸಹಾಯಕರು / ಆಡಳಿತಾಧಿಕಾರಿಗಳು ಮತ್ತು ಕಛೇರಿ ಮುಖ್ಯಸ್ಥರುಗಳಾದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ / ಉಪ ಅರಣ್ಯ ಸಂರಕ್ಷಣಾಧಿಕಾರಿ / ಅರಣ್ಯ ಸಂರಕ್ಷಣಾಧಿಕಾರಿ / ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರತಿ ಮಾಹೆ ಪರಿಶೀಲನೆ ಮಾಡಬೇಕಾಗಿರುತ್ತದೆ.

ಆದ್ದರಿಂದ ಪತ್ರಾಂಕಿತ ವ್ಯವಸ್ಥಾಪಕರು ಪ್ರತಿ ಮಾಹೆ ವಿಷಯ ನಿರ್ವಾಹಕರ ಡೈರಿಯನ್ನು ಪರಿಶೀಲಿಸುವುದು ಹಾಗೂ ಪ್ರತಿ ಪತ್ರಗಳನ್ನು ವಿಷಯ ನಿರ್ವಾಹಕನು ಸಮಯಕ್ಕೆ ಸರಿಯಾಗಿ ವಿಲೇವಾರಿ ಮಾಡಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು. ಪತ್ರಗಳನ್ನು ಸರಿಯಾದ ಸಮಯಕ್ಕೆ ವಿಲೇವಾರಿ ಮಾಡದಿದ್ದಲ್ಲಿ ಸಂಬಂಧಿಸಿದವರಿಂದ ವಿವರಣೆ ಪಡೆದು ಶಿಸ್ತು ಕ್ರಮಕೈಗೊಳ್ಳುವುದು. ಇದೇ ರೀತಿ ಕೇಂದ್ರ ಕಛೇರಿಯಲ್ಲಿಯೂ ಸಹಾ ಪರಿಶೀಲನೆಯನ್ನು ಮಾಡಿ ಸಮಯಕ್ಕೆ ಸರಿಯಾಗಿ ಪತ್ರಗಳ ವಿಲೇವಾರಿ ಮಾಡತಕ್ಕದ್ದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು)

1) ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ
2) ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ (JCH)
3) ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ
4) ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ
5) ಎಲ್ಲಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ
6) ಎಲ್ಲಾ ಆಡಳಿತಾಧಿಕಾರಿಗಳಿಗೆ, ಆಡಳಿತ ಸಹಾಯಕರಿಗೆ, ಪತ್ರಾಂಕಿತ ವ್ಯವಸ್ಥಾಪಕರು.